ಬಂದಿದ್ದೇವೆ ಅಲ್ಲಿ 400 ಗುಡಿಸಲುಗಳಿದ್ದು, ಜಿಲ್ಲಾಧಿಕಾರಿಯವರು ಈ ಗುಡಿಸಲು ನಿವಾಸಿಗಳಿಗೆಲ್ಲಾ ಸ್ಲಿಪ್ಸ್ ಕೊಟ್ಟಿದ್ದು, ಇವರಿಗೆಲ್ಲಾ ಬೇರೆ ಸ್ಥಳದಲ್ಲಿ ವಾಸಿಸಲು ಅವಕಾಶ ಕಲ್ಪಿಸಿಕೊಡಬೇಕೇ? ಬೇಡವೇ? ಎಂಬುದು ಇನ್ನೂ ಪರಿಶೀಲನೆಯಲ್ಲಿದೆ. ಆದರೆ ಅಲ್ಲಿ ಯಾವುದೇ ಕೊಳಚೆಗೇರಿ ಇಲ್ಲವೆಂದು ಮಂತ್ರಿಗಳು ಹೇಳುತ್ತಿದ್ದಾರೆ. ಅವರು ಅಲ್ಲಿ ಹೋಗಿ ನೋಡಿಲ್ಲ. ಅವೊತ್ತು ಸ್ಥಳಕ್ಕೆ ಭೇಟಿ ನೀಡುವಾಗ ನಮ್ಮ ಜೊತೆ ಪತ್ರಕರ್ತರೆಲ್ಲಾ ಬಂದಿದ್ದರು ಮತ್ತು ಆ ಜಾಗದ ಒಂದು ಕಡೆ ರಸ್ತೆ ಇದ್ದು, ಸುಮಾರು 30 ವರ್ಷಗಳಿಂದ ಅಲ್ಲಿ 50 ಸಾವಿರ ಕೊಳಚೆ ನಿವಾಸಿಗಳು ವಾಸವಾಗಿದ್ದಾರೆ. ಆದರೆ. ಮಾನ್ಯ ಮಂತ್ರಿಗಳು ಅಲ್ಲಿ ಯಾವುದೇ ಕೊಳಚೆ ಪ್ರದೇಶ ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಅಜಯ್‌ಕುಮಾರ್ ಸರನಾಯಕ್ : ಮಾನ್ಯ ಸದಸ್ಯರು ಹೇಳುತ್ತಿರುವಂತೆ ಕೊಳಚೆಗೇರಿ ಇರುವಂಥ ಜಾಗದಲ್ಲಿ ಹೌಸಿಂಗ್ ಕಾಂಪ್ಲೆಕ್ಸ್ ಬರುತ್ತದೆಯೇ ಹೊರತು ಕ್ರೀಡಾಂಗಣವಲ್ಲ. ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಟೆಂಡರ್‌ಗಳನ್ನು ಕರೆದು ವರ್ಕ್ ಆರ್ಡರ್ ಇಶ್ಯೂ ಮಾಡಿದ ನಂತರ ನಾನು ಆ ಸ್ಥಳವನ್ನು ಪರಿಶೀಲಿಸಿದ್ದು, ಎಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣವಾಗುತ್ತಿದೆಯೋ ಅಲ್ಲಿ ಯಾವುದೇ ತರಹದ ಕೊಳಚೆಗೇರಿ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲಿ ಒಳಾಗಂಣ ಕ್ರೀಡಾಂಗಣವನ್ನು ಕಟ್ಟುತ್ತಿರುವಂಥ ಸಂದರ್ಭದಲ್ಲಿ ಅಲ್ಲಿನ ವಸತಿಹೀನ ಜನರೆಲ್ಲರೂ ಮೊನ್ನೆ ದಿವಸ ಮೆರವಣಿಗೆಯಲ್ಲಿ ಬಂದು ಪ್ರತಿಭಟನೆ ಮಾಡಿ ಮತ್ತೆ ಪುನರ್ವಸತಿ ಕಲ್ಪಿಸಿಕೊಡಬೇಕೆಂಬ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಆದರೆ, ಅಲ್ಲಿ ಯಾರಿಗೂ ಸಹ ತೊಂದರೆಯಾಗಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ವಸತಿಹೀನರಾದವರಿಗೆ ಪುನರ್ವಸತಿ ಕಲ್ಪಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು : ಕ್ರೀಡಾ ಸಮುಚ್ಚಯ ಬೇರೆ, ಕ್ರೀಡಾಂಗಣ ಬೇರೆ. ನೀವು ಕೇಳುತ್ತಿರುವ ಪ್ರಶ್ನೆ ವಸತಿ ಸಚಿವರಿಗೆ ಸಂಬಂಧಿಸಿದ್ದಾಗಿದೆ.

ಶ್ರೀ ಬಿ.ಆರ್. ಯಾವಗಲ್ : ಈ ಕ್ರೀಡಾಂಗಣದ ನಿರ್ಮಾಣದಲ್ಲಿ ಮೊದಲು ಕಂಠೀರವ ಕ್ರೀಡಾಂಗಣ ಎಂದು ಏನಿತ್ತು, ಅದನ್ನು ಒಡೆದು ಬೇರೆ ಕ್ರೀಡಾಂಗಣ ನಿರ್ಮಿಸುತ್ತಿದ್ದಾರೆ. ಮತ್ತು ಕೋರಮಂಗಲದಲ್ಲೂ ಸಹ ಹೊಸದಾಗಿ ಕ್ರೀಡಾಗಣ ನಿರ್ಮಾಣ ಮಾಡುವ ಕೆಲಸ ಕೈಗೆತ್ತಿಕೊಂಡಿದ್ದೇವೆಂದು ಸಚಿವರು ಹೇಳಿದ್ದಾರೆ. ಬೆಂಗಳೂರು ನಗರ ಬಹಳ ಕೊನೆಯಲ್ಲಿರುವುದರಿಂದ ಕ್ರೀಡಾಂಗಣಗಳ ನಿರ್ಮಾಣವನ್ನು ಹುಬ್ಬಳ್ಳಿಯಲ್ಲಿ, ಬೆಳಗಾವಿಯಲ್ಲಿ ಇಲ್ಲವೇ ಧಾರವಾಡದಲ್ಲಿ ಮಾಡಬಹುದಿತ್ತು. ಇಂತಹ ಕಡೆಗಳಲ್ಲಿ ಏಕೆ ನಿರ್ಮಾಣ ಮಾಡಿಲ್ಲವೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇವೆಂದು ಹೇಳಿ.

ಬಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿ ಹಾಸುಗೆಗಳನ್ನು ಹೆಚ್ಚಿಸುವ ಬಗ್ಗೆ.

156 - ಶ್ರೀ ಶಿವಾನಂದ. ಎಸ್. ಪಾಟೀಲ್ (ತಿಕೋಟೆ) - ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿನ ಹಾಸಿಗೆಗಳನ್ನು ಹೆಚ್ಚಿಸುವ ಪ್ರಸ್ತಾಪನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ?*
2. *ಮುಖ್ಯ ಆಭಿಯಂತರರು (ಸಂಪರ್ಕ ಮತ್ತು ಕಟ್ಟಡ) ಧಾರವಾಡ ಇವರು ಆಡಳಿತಾತ್ಮಕ ಮಂಜೂರಾತಿಯಾಗಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ*

ಬೆಂಗಳೂರು ಇವರಿಗೆ ದಿ. 21-1-1994 ರಂದು ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚವೆಷ್ಟು ಹಾಗೂ ಇದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು? ಮತ್ತು ಯಾವಾಗ ಮಂಜೂರಾತಿ ಕೊಡಲಾಗುವುದು?

ಶ್ರೀ ಹೆಚ್.ಸಿ. ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

1. ಇದೆ

2. ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ರವರಿಗೆ ಕಳುಹಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆ.

3.ರೂ. 90-00 ಲಕ್ಷಗಳನ್ನು ಅಂದಾಜು ವೆಚ್ಚಗಳನ್ನು ಪ್ರಸ್ತಾವಿಸಲಾಗಿದ್ದು, ಆಡಳಿತಾತ್ಮಕ ಅನುಮೋದನೆಯನ್ನು ಇನ್ನು ನೀಡಿಲ್ಲ.

ಬಿಜಾಪುರ ಟಿ.ಬಿ. ಆಸ್ಪತ್ರೆಯಲ್ಲಿರುವ 110 ಹಾಸಿಗೆಗಳನ್ನು ಸೇರಿ ಒಟ್ಟು 426 ಹಾಸಿಗೆಗಳನ್ನು ಸೇರಿ ಒಟ್ಟು 426 ಹಾಸಿಗೆಗಳುಳ್ಳ ಬಿಜಾಪುರ ಜಿಲ್ಲಾ ಆಸ್ಪತ್ರೆಯು ರೋಗಿಗಳ ವಿವಿಧ ಚಿಕಿತ್ಸೆ ಆಸ್ಪತ್ರೆಯ ರೋಗಿಗಳ ವಿವಿಧ ಚಿಕಿತ್ಸೆ ಬೇಡಿಕೆಗಳನ್ನು ನಿರ್ವಹಿಸುತ್ತಿದೆ, ಅದಲ್ಲದೆ, ಈ ಶಹರದಲ್ಲಿ ಖಾಸಗೀ ವೈದ್ಯಕೀಯ ಮಹಾವಿದ್ಯಾಲಯಗಳಿಗೆ 2 ಆಸ್ಪತ್ರೆಗಳು ಸಹ ಇವೆ ಹಾಗೂ ಅವುಗಳಲ್ಲಿಯೂ ಸಾರ್ವಜನಿಕರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಸಧ್ಯದ ಆರ್ಥಿಕ ಕೊರತೆ ಹಾಗೂ ಮೇಲಿನ ಸನ್ನಿವೇಶಗಳನ್ನು ಗಮನದಲ್ಲಿಟ್ಟು ಕೊಂಡು, ಸದರಿ ಜಿಲ್ಲಾಸ್ಪತ್ರೆಯಲ್ಲಿ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸಬೇಕೆ ಎಂಬುದರ ಕುರಿತು ಪರಿಶೀಲನೆ ನಡೆದಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಮೊದಲನೆಯ ಪ್ರಶ್ನೆ, ಬಿಜಾಪುರ ಜಿಲ್ಲಾ ಆಸ್ಪತ್ರೆಯಲ್ಲಿನ ಹಾಸಿಗೆಗಳನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ? ಎಂದು ಕೇಳಿದ್ದಕ್ಕೆ ಉತ್ತರವಾಗಿ ಇದೆ ಎಂದು ಹೇಳಿದ್ದಾರೆ. ಆದರೆ, ಮೂರನೆಯ ಪ್ರಶ್ನೆಗೆ ಉತ್ತರವಾಗಿ ಏನು ಹೇಳಿದ್ದಾರೆಂದರೆ, ಆರ್ಥಿಕ ಕೊರತೆ ಸಲುವಾಗಿ ಇದನ್ನು ಪುನರ್ ಪರಿಶೀಲಿಸುತ್ತೇವೆಂದು, ಒಂದು ವಿಚಾರ ಸನ್ಮಾನ್ಯ ಸಚಿವರಿಗೆ ಗೊತ್ತಿದೆಯೋ ಇಲ್ಲವೋ, ಏನೆಂದರೆ, ದಿನಾಂಕ 31-8-93ರಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಅದಕ್ಕೆ ಅಡಿಗಲ್ಲು ಹಾಕಿದ್ದಾರೆ. ಆದರೆ, ಈ ಒಂದು ಪ್ರಸ್ತಾವನೆಗೆ ಇನ್ನೂ ಆಡಳಿತಾತ್ಮಕ ಮಂಜೂರಾತಿ ದೊರೆತಿಲ್ಲವೆಂದು ಹೇಳುವುದಾದರೆ ಇದು ಅಷ್ಟು ಸಮಂಜಸವಾದ ಉತ್ತರವಲ್ಲವೆಂದು ನನಗನ್ನಿಸುತ್ತದೆ. ಮಾಜಿ ಮುಖ್ಯಮಂತ್ರಿಗಳು ಅಡಿಗಲ್ಲು ಹಾಕಿದಂಥ ಸಂದರ್ಭದಲ್ಲಿ ಆಗ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿರಲೇಬೇಕು. ಏಕೆಂದರೆ, ಅಡಿಗಲ್ಲು ಹಾಕಿದ್ದು 1993ರಲ್ಲಿ, ಈಗ ನಾವು 1995ನೇ ಇಸವಿಯಲ್ಲಿದ್ದೇವೆ, ಇದುವರೆವಿಗೂ ಆಡಳಿತಾತ್ಮಕ ಮಂಜೂರಾತಿ ದೊರೆತಿಲ್ಲವೆಂದರೆ ಇದರಲ್ಲಿ ತಪ್ಪಾಗಿದೆ ಎಂದೆನಿಸುತ್ತದೆ. ದಯಮಾಡಿ ಸಚಿವರು ಇದರ ಬಗ್ಗೆ ಉತ್ತರಿಸಿ ಸ್ಪಷ್ಟಪಡಿಸಬೇಕು.

ಡಾ॥ ಹೆಚ್.ಸಿ. ಮಹದೇವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಬಿಜಾಪುರ ಟಿ.ಬಿ. ಆಸ್ಪತ್ರೆಯಲ್ಲಿರುವ 110 ಹಾಸಿಗೆಗಳನ್ನು ಸೇರಿಸಿದರೆ ಒಟ್ಟು 426 ಹಾಸಿಗೆಗಳಾಗುತ್ತದೆ. ಇದನ್ನು 500 ಹಾಸಿಗೆಗಳ ಸಂಖ್ಯೆಗೆ ಅಂದರೆ ಜಿಲ್ಲಾ ಆಸ್ಪತ್ರೆ ಮಟ್ಟಕ್ಕೆ ಏರಿಸಬೇಕೆಂಬ ಉದ್ದೇಶವಿದೆ. ಸುಮಾರು 90 ಲಕ್ಷ ರೂಪಾಯಿಗಳ ಅಂದಾಜು ಪ್ರಸ್ತಾವನೆಗೆ ಇನ್ನೂ

ಅನುಮೋದನೆ ನೀಡಿಲ್ಲ. ಹೀಗಾಗಿ ಮುಂದೆ ವಿಶ್ವ ಬ್ಯಾಂಕ್ ನೆರವಿನಿಂದ ಜಿಲ್ಲಾ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದಕ್ಕೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ಪರಿಶೀಲಿಸುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ದಿನಾಂಕ 31.8.93ರಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಇದಕ್ಕೆ ಶಿಲಾನ್ಯಾಸ ನೆರವೇರಿಸಿದರೆಂದು ಸನ್ಮಾನ್ಯ ಮಿತ್ರರು ಹೇಳಿದರು. ಆ ಒಂದು ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೋ? ಇಲ್ಲವೋ? ಏಕೆಂದರೆ, contradictory statement have been given. Whether it has come to the notice of the Government or not?

11.40 ಎ.ಎಂ

ಶ್ರೀ ಶಿವಾನಂದ ಎಸ್. ಪಾಟೀಲ್ : 1993ನೇ ಇಸವಿಯಲ್ಲಿ ಅಲ್ಲಿ ಶಿಲಾನ್ಯಾಸವನ್ನು ಮಾಡಿದ್ದಾರೆ. 1995ನೇ ಇಸವಿಯಾದರೂ ಸಹ ಅದಕ್ಕೆ ಮಂಜರಾತಿಯನ್ನು ಕೊಟ್ಟಿಲ್ಲ ಎಂದರ ಹೇಗೆ?

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಶಿವಾನಂದರವರೆ ತಮಗೆ ಗೊತ್ತಿಲ್ಲ. ಇಂಥ ಎಷ್ಟೋ ಕಲ್ಲುಗಳನ್ನು ಹಾಕಿದ್ದಾರೆ. ಅವುಗಳೆಲ್ಲವನ್ನು ಈಗ ವಾಪಸ್ ತೆಗೆಸಬೇಕೋ ಏನೋ ಮಾಡಬೇಕಾಗುತ್ತದೆ.

ರಾಜ್ಯದಲ್ಲಿ ಮೂತ್ರಪಿಂಡ ಹಗರಣ

270 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ತಿಂಗಳಿನಲ್ಲಿ ರಾಜ್ಯದಲ್ಲಿ ಎಷ್ಟು ಮೂತ್ರ ಪಿಂಡ ಹಗರಣಗಳು ಪತ್ತೆಯಾಗಿವೆ.

ಆ) ಈ ಮೂತ್ರಪಿಂಡ ಶಸ್ತ್ರ ಚಿಕಿತ್ಸೆಯನ್ನು ನಗರದ ಯಾವ ಯಾವ ಆಸ್ಪತ್ರೆಗಳಲ್ಲಿ ನಡೆಸಲಾಗಿದೆ.

ಇ) ಇದರಲ್ಲಿ ಎಷ್ಟು ಜನ ಸರ್ಕಾರಿ ವೈದ್ಯರು ಹಾಗೂ ಖಾಸಗಿ ಆಸ್ಪತ್ರೆಗಳವೈದ್ಯರು ಶಾಮಿಲಾಗಿದ್ದಾರೆ (ಅವರುಗಳ ಹೆಸರುಗಳನ್ನೊದಗಿಸುವುದು)

ಈ) ಇದುವರೆವಿಗೂ ಎಷ್ಟು ಜನ ವೈದ್ಯರ ಮೇಲೆ ಈ ಸಂಬಂಧವಾಗಿ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ.

ಉ) ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆನ್ನಲಾ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಊ) ಅವರನ್ನು ಅಮಾನತ್ತಿನಲ್ಲಿಡಲಾಗಿದೆಯೇ ಇಲ್ಲವೆ ಸೇವೆಯಿಂದ ವಜಾ ಮಾಡಲಾಗಿದೆಯೇ?

ಎ) ಈ ಪ್ರಕರಣದಲ್ಲಿ ಭಾಗಿಯಾದ ಖಾಸಗಿ ಆಸ್ಪತ್ರೆಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು. ಅಂತಹ ಆಸ್ಪತ್ರೆಗಳನ್ನು ಮುಚ್ಚುವಂತೆ ಸೂಚಿಸಲಾಗುವುದೇ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಇಲ್ಲಿತನಕ ಐದು ಪ್ರಕರಣಗಳು ಬೆಳಕಿಗೆ ಬಂದಿವೆ.

ಆ) ಪೋಲಿಸ್ ಎಫ್.ಐ.ಆರ್. ಪ್ರಕಾರ ಯಲ್ಲಮ್ಮ ದಾಸಪ್ಪ ಆಸ್ಪತ್ರೆಯು ಈ ಪ್ರಕರಣದಲ್ಲಿ ಬಾಗಿಯಾಗಿದೆ. ಬೆಂಗಳೂರಿನಲ್ಲಿರುವ ಇತರ ಆಸ್ಪತ್ರೆಗಳಲ್ಲಿ ಯಾವ ಯಾವ ಆಸ್ಪತ್ರೆಗಳು ಬಾಗಿಯಾಗಿದೆ ಎಂಬುದನ್ನು ಪೋಲಿಸಿನವರು ತನಿಖೆ ಮಾಡುತ್ತಿದ್ದಾರೆ.